ಪ್ರಕೃತಿ ಚಿಕಿತ್ಸೆ ಪದ್ಧತಿಯನ್ನು ಕಡೆಗಾಣಿಸಿರುವ ಬಗ್ಗೆ.

(745) - ಶ್ರೀ ಬಸವರಾಜ್ (ಬ್ರಹ್ಮಾವರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಆಯುರ್ವೇದ ಮತ್ತು ಯುನಾನಿ ರಿಜಿಸ್ಟ್ರೇಶನ್ ಮತ್ತು ಪ್ರಾಕ್ಟೀಷನರ್ಸ್ ಬಗ್ಗೆ ಆದೇಶ ಹೊರಡಿಸಿದೆಯೆ? ಇದರಲ್ಲಿ ಪ್ರಕೃತಿ ಚಿಕಿತ್ಸೆಯನ್ನು ಭಾರತೀ ವೈದ್ಯಪದ್ಧತಿಗಳಿಗೆ ಸಮಾನವಾಗಿ ಮಾನ್ಯ ಮಾಡಿದೆಯೇ? (ದಿನಾಂಕ ಮತ್ತು ಆದೇಶ ಸಂಖ್ಯೆ ತಿಳಿಸುವುದು)

ಆ) ಈ ಔಷಧಿ ಚಿಕಿತ್ಸಾ ಪದ್ಧತಿಯನ್ನು ಪ್ರತ್ಯೇಕವಾಗಿ ಅಭಿವೃದ್ಧಿ ಪಡಿಸಲು ಯಾವ ರೀತಿ ಪ್ರೋತ್ಸಾಹ ನೀಡಲಾಗುವುದು?

ಇ) ಎಲ್ಲಾ ಚಿಕಿತ್ಸೆ ಪದ್ಧತಿಗಳಲ್ಲಿ ಪೂರ್ಣಾವಧಿ ಪದವಿ ಕಾಲೇಜುಗಳಿದ್ದರೂ ಪ್ರಕೃತಿ ಚಿಕಿತ್ಸೆ ಮತ್ತು ಯೋಗಕ್ಕಾಗಿ ಕಾಲೇಜು ಸ್ಥಾಪಿಸಲು ಅವಶ್ಯಕತೆ ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಈ) ಬಂದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?

ಉ) ಮೈಸೂರಿನಲ್ಲಿ ಕೇವಲ ಆಯುರ್ವೇದ ವೈದ್ಯರಿಗೆ ಮಾತ್ರ 1984 ರಿಂದ 2 ವರ್ಷದ ಕಂಡೆನ್ಸ್‌ಡ್ ಡಿಪ್ಲೊಮಾ ಕೋರ್ಸನ್ನು ಪ್ರಕೃತಿ ಚಿಕಿತ್ಸೆ ಆಸ್ಪತ್ರೆ ಮತ್ತು ಸೌಕರ್ಯಗಳಿಲ್ಲದೆ ನಡೆಸುತ್ತಿರುವುದು ನಿಜವೆ?

ಊ) ಪ್ರಕೃತಿ ಚಿಕಿತ್ಸಾ ಪದ್ಧತಿಯಿಂದ ಒಂದು ರೋಗಿಗೆ ಚಿಕಿತ್ಸೆ ನೀಡದೆ ರೂ. 500-00 ಸ್ಟೈಫಂಡ್ ಕೊಡುತ್ತಿರುವುದು ಸಾರ್ವಜನಿಕ ಹಣದ ಅಪವ್ಯಯ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಋ) ಈ ಕಾಲೇಜು ಅನಾವಶ್ಯಕವೆಂದು ಸರ್ಕಾರ ಪರಿಗಣಿಸಿ 1990ರಿಂದ ಪ್ರವೇಶ ನೀಡದಂತೆ ಸರ್ಕಾರವೇ ಆದೇಶ ಹೊರಡಿಸಿರುವುದು ನಿಜವೆ?

ೠ) ಈ ಬಗ್ಗೆ ತಜ್ಞರ ಸಮಿತಿ ನೀಡಿದ ವರದಿಯನ್ನು ಅನುಷ್ಠನಕ್ಕೆ ತರಲಾಗಿದೆಯೆ?

ಎ) ತರಲಾಗದಿದ್ದಲ್ಲಿ ಕಾರಣವೇನು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು):

ಅ) ಕರ್ನಾಟಕ ಆಯುರ್ವೇದ ಮತ್ತು ಯುನಾನಿ ರಿಜಿಸ್ಟ್ರೇಶನ್ ಮತ್ತು ಪ್ರಾಕ್ಟೀಷನರ್ಸ್ ಬಗ್ಗೆ ಆದೇಶ ಹೊರಡಿಸಿದೆ. ಕರ್ನಾಟಕ ಆಕ್ಟ್ ಸಂಖ್ಯೆ 9:1962. ಇದರಲ್ಲಿ ಪ್ರಕೃತಿ ಚಿಕಿತ್ಸೆಯನ್ನು ಸೇರಿಸಿ (ಕರ್ನಾಟಕ ಆಕ್ಟ್ ಸಂಖ್ಯೆ: 7:1977 ದಿನಾಂಕ 20-4-77) ಆಕ್ಟ್‌ಗೆ ತಿದ್ದುಪಡಿ ಮಾಡಲಾಗಿದೆ.

ಆ) ಬೆಂಗಳೂರು ಮತ್ತು ಮೈಸೂರು ಆಯುರ್ವೇದ ಮಹಾವಿದ್ಯಾಲಯಗಳಲ್ಲಿ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ಪದ್ಧತಿಯನ್ನು ಜನಪ್ರಿಯಗೊಳಿಸಲು ಯೋಗಾ ತರಗತಿಗಳನ್ನು ಪುರುಷ ಮತ್ತು ಮಹಿಳೆಯರಿಗಾಗಿ ಪ್ರತ್ಯೇಕವಾಗಿ ನಡೆಸಲಾಗುತ್ತಿದೆ. ಸಾರ್ವಜನಿಕರ ಬೇಡಿಕೆ ಹಾಗೂ ಆಯವ್ಯಯದ ಸೌಲಭ್ಯವನ್ನು ಗಮನದಲ್ಲಿಟ್ಟುಕೊಂಡು ಪ್ರಕೃತಿ ಚಿಕಿತ್ಸೆ ಔಷಧಾಲಯ ಮತ್ತು ಆಸ್ಪತ್ರೆಗಳನ್ನು ತೆಗೆಯಲಾಗುವುದು.

ಇ) ಬಂದಿರುತ್ತದೆ.

ಈ) 8ನೇ ಪಂಚವಾರ್ಷಿಕ ಯೋಜನೆಯಡಿ ಪೂರ್ಣಾವಧಿ ಕಾಲೇಜನ್ನು ತೆರೆಯಲು ಆಯವ್ಯಯದಲ್ಲಿ ಹಣ ಬದಗಿಸಲಾಗಿದೆ.

ಉ) ಮೈಸೂರಿನಲ್ಲಿ 1984ರಿಂದ ಪ್ರಕೃತಿ ಚಿಕಿತ್ಸೆ ಮತ್ತು ಯೋಗದಲ್ಲಿ 2 ವರ್ಷದ ಡಿಪ್ಲೊಮಾ ಕೋರ್ಸನ್ನು ಪ್ರಕೃತಿ ಚಿಕಿತ್ಸೆ ಆಸ್ಪತ್ರೆ ಮತ್ತು ಇತರ ಕನಿಷ್ಟ ಸೌಕರ್ಯಗಳೊಂದಿಗೆ ಆಯುರ್ವೇದ ಪದವೀಧರರಿಗೆ ಮಾತ್ರ ನಡೆಸಲಾಗುತ್ತಿದೆ.

ಊ) ಇಲ್ಲ. ಪ್ರಕೃತಿ ಚಿಕಿತ್ಸೆ ಮತ್ತು ಯೋಗದಲ್ಲಿ ಡಿಪ್ಲೊಮಾ ಕೋರ್ಸನ್ನು ಅಭ್ಯಾಸ ಮಾಡುತ್ತಿರುವ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ರೂ. 440-00 ಸ್ಟೈಫಂಡ್ ನೀಡಲಾಗುತ್ತಿದೆ. ಕಾಲೇಜಿಗೆ ಹೊಂದಿಕೊಂಡಂತೆ ಪ್ರಕೃತಿ ಚಿಕಿತ್ಸೆ ಆಸ್ಪತ್ರೆ ಇದ್ದು ಈ ಆಸ್ಪತ್ರೆಯಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಋ) ಇಲ್ಲ. ಸರ್ಕಾರವು ಪೂರ್ಣ ಪ್ರಮಾಣದ ಪದವಿ ಕಾಲೇಜು ತೆರೆಯುವ ಉದ್ದೇಶದಿಂದ ಡಿಪ್ಲೊಮಾಕ್ಕೆ ಪ್ರವೇಶ ನೀಡುವುದನ್ನು ತಡೆ ಹಿಡಿಯಲು ನಿರ್ದೇಶನ ನೀಡಲಾಗಿತ್ತು.

ಌ) ಡಿಪ್ಲೊಮಾ ಕೋರ್ಸನ್ನು 1990-91ರಿಂದ ಎರಡು ವರ್ಷಗಳ ಅವಧಿಗೆ ಮುಂದಾವರಿಸಲಾಗಿದೆ. ಉಪಸಮಿತಿಯ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಎ) ಉದ್ಭವಿಸುವುದಿಲ್ಲ.

ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆಯಲ್ಲಿ ಎರಡು ಪ್ರತ್ಯೇಕ ಶಿಕ್ಷಣ ವಲಯ ರಚನೆ.

(486) - ಶ್ರೀ ಎಸ್. ಆರ್. ಮೋರೆ, (ಧಾರವಾಡ): ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಹಾಗೂ ಧಾರವಾಡ ನಗರ ಪ್ರದೇಶಕ್ಕೆ ಪ್ರತ್ಯೇಕವಾಗಿ ಒಂದೊಂದು ಶಿಕ್ಷಣ ವಲಯಗಳನ್ನು ಸ್ಥಾಪಿಸಬೇಕೆಂದು ಕೋರಿ ಸರ್ಕಾರದವರಿಗೆ ಮನವಿಗಳೇನಾದರೂ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಶಿಕ್ಷಣ ವಲಯಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು ಹಾಗೂ ಅವುಗಳ ರೂಪರೇಷಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):

ಅ) 1990-91ರ ಸಾಲಿನಲ್ಲಿ ಮನವಿ ಪ್ರಸ್ತಾವನೆ ಬಂದಿರುವುದಿಲ್ಲ.

ಆ) 1991-92ನೇ ಸಾಲಿನಲ್ಲಿ ಈ ವಿಷಯವನ್ನು ಪರಿಶೀಲಿಸಲಾಗುವುದು.

ವಯಸ್ಕರ ಶಿಕ್ಷಣದ ಬಗ್ಗೆ.

(305) - ಶ್ರೀ ಹೆಚ್.ಎಂ. ರೇವಣ್ಣ, (ಮಾಗಡಿ): ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ವಯಸ್ಕರ ಶಿಕ್ಷಣಕ್ಕಾಗಿ ವರ್ಷಕ್ಕೆ ಎಷ್ಟು ಹಣವನ್ನು ಖರ್ಚು ಮಾಡುತ್ತದೆ?

ಆ) ಸ್ವಯಂ ಸಂಸ್ಥೆಗಳಿಗೆ ಕೇಂದ್ರ ಸರ್ಕಾರದಿಂದ ವಯಸ್ಕರ ಶಿಕ್ಷಣಕ್ಕಾಗಿ ಬರುವ ಮೊತ್ತವೆಷ್ಟು?

ಇ) ಕೇಂದ್ರ ಸರ್ಕಾರವು ವಯಸ್ಕರ ಶಿಕ್ಷಣಕ್ಕಾಗಿ ನೀಡುವ ಹಣದ ಮೇಲೆ ರಾಜ್ಯ ಸರ್ಕಾರದ ಹತೋಟಿ ಇದೆಯೆ?

ಈ) ಈ ಬಾಬತ್ತಿನಲ್ಲಿ ಹಣವು ದುರುಪಯೋಗವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಉ) ಹಾಗಿದ್ದಲ್ಲಿ ಸರ್ಕಾರವು ಅದರ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ರೂ. 231.14 ಲಕ್ಷಗಳು.